18-12-2024

(60)

# ಕರ್ನಾಟಕ ವಿಧಾನ ಪರಿಷತ್ತು

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಸಿ.ಎನ್. ಮಂಜೇಗೌಡ ಇವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ಕುರಿತು.

**ವಿಷಯ:** ದಿನಾಂಕ 17-12-2024ರ ಈ ಸಂಜೆ ಪತ್ರಿಕೆಯಲ್ಲಿ "ಗ್ಯಾರಂಟಿಗೆಯತ್ತ ಲಕ್ಷ ಹೈನುಗಾರರಿಗೆ ನಿರ್ಲಕ್ಷ್ಯ" ಎಂಬ ಶೀರ್ಷಿಕೆಯಡಿ ವರದಿ ಪ್ರಕಟವಾಗಿರುತ್ತದೆ.

ರಾಜ್ಯ ಸರ್ಕಾರ ಗ್ಯಾರಂಟಿ ಯೋಜನೆಗಳಿಗೆ ಹೆಚ್ಚಿನ ವಿಶೇಷ ಆಸಕ್ತಿ ತೋರಿಸಿದ ಕಾರಣ, ಹಣವಿಲ್ಲ ಎಂಬ ಕಾರಣ ನೀಡಿ ಕಳೆದ ಒಂಭತ್ತು ತಿಂಗಳಿನಿಂದ ಹೈನುಗಾರರಿಗೆ ಪ್ರೋತ್ಸಾಹಧನ ನೀಡದಿರುವುದು ಬೆಳಕಿಗೆ ಬಂದಿರುತ್ತದೆ. ಕ್ಷೀರಧಾರೆ ಯೋಜನೆಯಡಿ ರೈತರು ಪೂರೈಸುವ ಪ್ರತಿ ಲೀಟರ್ ಹಾಲಿಗೆ ಸರ್ಕಾರ 5 ರೂ. ಪ್ರೋತ್ಸಾಹಧನ ನೀಡಬೇಕಿದೆ. ಈ ಬಗ್ಗೆ ಪ್ರಸ್ತಾವನೆ ಹಣಕಾಸು ಇಲಾಖೆ ಮುಂದೆ ಬಾಕಿಯಿರುವುದರಿಂದ ರೈತರಿಗೆ ಪ್ರೋತ್ಸಾಹಧನ ಪಾವತಿಯಾಗಿರುವುದಿಲ್ಲ. ಪ್ರತಿ ದಿನ ರಾಜ್ಯಾದ್ಯಂತ ಒಂದು ಕೋಟಿ ಲೀಟರ್ ಹಾಲು ಸಂಗ್ರಹವಾಗುತ್ತಿದ್ದು ಕರ್ನಾಟಕ ಹೈನುಗಾರಿಕೆಯಲ್ಲಿ ಅಗ್ರಸ್ಥಾನದಲ್ಲಿದೆ. 2023ರ ವಿಧಾನಸಭೆ ಚುನಾವಣೆಗೂ ಮೊದಲು ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದರೆ ಪ್ರೋತ್ಸಾಹ ಧನವನ್ನು ಪ್ರತಿ ಲೀಟರ್‌ಗೆ 6 ರೂ.ಗೆ ಹೆಚ್ಚಿಸುವುದಾಗಿ ಹೇಳಿತ್ತು. ಆದರೆ ರೈತರಿಗೆ ಪಾವತಿಸಬೇಕಾದ ಮೊತ್ತ ರೂ.606 ಕೋಟಿ ಬಾಕಿ ಉಳಿದಿರುವುದು ತಿಳಿದುಬಂದಿರುತ್ತದೆ.

ಪರಿಶಿಷ್ಟ ಜಾತಿ ಸಮುದಾಯದ ಹೈನುಗಾರರಿಗೆ ಅಕ್ಟೋಬರ್ ತಿಂಗಳಿಗೆ 6.85 ಕೋಟಿ ರೂ. ಪಾವತಿಸಬೇಕಿದ್ದರೆ, ಎಸ್ಟಿ ರೈತರಿಗೆ 2024ರ ನವೆಂಬರ್ ತಿಂಗಳಿಗೆ ರೂ.9. ಕೋಟಿ ಪಾವತಿಸಬೇಕಿದೆ. ಸರ್ಕಾರ ಬಾಕಿ ಹಣವನ್ನು ಕಂತುಗಳಲ್ಲಿ ಪಾವತಿಸುವುದಾಗಿ ಹೇಳುತ್ತಿದೆ. ರಾಜ್ಯದಲ್ಲಿ ಸುಮಾರು 38 ಲಕ್ಷ ಹೈನುಗಾರರಿದ್ದು, ಶೇ.90ಕ್ಕೂ ಹೆಚ್ಚು ಮಹಿಳೆಯರು ಇದ್ದಾರೆ. ರಾಜ್ಯ ಸರ್ಕಾರ ಮಹಿಳಾ ಸಬಲೀಕರಣದ ಬಗ್ಗೆ ಮಾತನಾಡುತ್ತದೆ ಹೊರತು ಪ್ರೋತ್ಸಾಹಧನದ ಬಗ್ಗೆ ಮೌನ ವಹಿಸಿದೆ. ಒಟ್ಟಾರೆ 1000 ಕೋಟಿ ರೂ. ಹೈನುಗಾರರಿಗೆ ನೀಡಬೇಕಾದ ಪ್ರೋತ್ಸಾಹಧನ ಬಾಕಿ ಇದ್ದು, ಈ ಮೊತ್ತವನ್ನು ಆದಷ್ಟು ಜಾಗ್ರತೆ ಬಿಡುಗಡೆ ಮಾಡಿ ಹೈನುಗಾರರ ಹಿತ ಕಾಪಾಡಲು ಸರ್ಕಾರ ಕೂಡಲೇ ಕ್ರಮ ಕೈಗೊಳ್ಳಬೇಕು ಎನ್ನುವ ಕುರಿತು.

**ಉತ್ತರ:**

2024-25 ನೇ ಸಾಲಿನಲ್ಲಿ ರಾಜ್ಯದ ಹಾಲು ಉತ್ಪಾದಕರಿಗೆ ಪ್ರೋತ್ಸಾಹಧನ ಪಾವತಿಸಲು ಸಾಮಾನ್ಯ ವರ್ಗದ ಹಾಲು ಉತ್ಪಾದಕರಿಗೆ ರೂ.1189.90 ಕೋಟಿಗಳನ್ನು, ಪ.ಜಾತಿಯ ಹಾಲು ಉತ್ಪಾದಕರಿಗೆ ರೂ.70.06 ಕೋಟಿಗಳನ್ನು ಪ.ಪಂಗಡದ ಹಾಲು ಉತ್ಪಾದಕರಿಗೆ ರೂ.40.04 ಕೋಟಿಗಳನ್ನು, ಒಟ್ಟಾರೆ ರೂ.1300.00 ಕೋಟಿಗಳ ಅನುದಾನ ನಿಗದಿಪಡಿಸಲಾಗಿದೆ.

ಪ್ರಸಕ್ತ ಸಾಲಿನಲ್ಲಿ ಇದುವರೆಗೆ ಮೂರು ಕಂತುಗಳಲ್ಲಿ ರೂ.974.98 ಕೋಟಿ ಹಾಗು ಸಾಮಾನ್ಯ ವರ್ಗದ ನಾಲ್ಕನೇ ಕಂತಿನ ಅನುದಾನ ರೂ.297.47 ಕೋಟಿಗಳಲ್ಲಿ ಮುಂಗಡವಾಗಿ ರೂ.150.00 ಕೋಟಿಗಳ ಅನುದಾನ ಸೇರಿದಂತೆ ಒಟ್ಟು ರೂ.1124.98 ಕೋಟಿ ಬಿಡುಗಡೆಯಾಗಿರುತ್ತದೆ. ಬಿಡುಗಡೆಯಾಗಿರುವ ಅನುದಾನದಲ್ಲಿ ಸಾಮಾನ್ಯ ವರ್ಗದ 9 ಲಕ್ಷ ಹಾಲು ಉತ್ಪಾದಕರಿಗೆ **ಜುಲೈ-2024ರ ಮಾಹೆವರೆಗೆ ರೂ.1108.13 ಕೋಟಿ ಪಾವತಿಸಲಾಗಿದ್ದು ಮತ್ತು ಪರಿಶಿಷ್ಟ ಜಾತಿ ವರ್ಗದ 52 ಸಾವಿರ ಹಾಲು ಉತ್ಪಾದಕರಿಗೆ ಸೆಪ್ಟೆಂಬರ್-2024ರ ಮಾಹೆಯವರೆಗೆ ರೂ.50.16 ಕೋಟಿ ಮತ್ತು ಪರಿಶಿಷ್ಟ ಪಂಗಡ ವರ್ಗದ 35 ಸಾವಿರ ಹಾಲು ಉತ್ಪಾದಕರಿಗೆ ಆಗಸ್ಟ್-2024ರ ಮಾಹೆಯವರೆಗೆ ರೂ.30.02 ಕೋಟಿ ಪ್ರೋತ್ಸಾಹಧನವನ್ನು ಪಾವತಿಸಲಾಗಿದೆ.**

ಸಾಮಾನ್ಯ ವರ್ಗದ ಹಾಲು ಉತ್ಪಾದಕರಿಗೆ ಆಗಸ್ಟ್-2024 ರಿಂದ ಅಕ್ಟೋಬರ್-2024 ರವರೆಗೆ ಒಟ್ಟು-3 ತಿಂಗಳಿಗೆ ರೂ.347.60 ಕೋಟಿ ಪ್ರೋತ್ಸಾಹಧನ ಪಾವತಿಗೆ ಬಾಕಿ ಇರುತ್ತದೆ. ಪರಿಶಿಷ್ಟ ಜಾತಿ ವರ್ಗದ ಹಾಲು ಉತ್ಪಾದಕರಿಗೆ ಅಕ್ಟೋಬರ್-2024 ಮಾಹೆಗೆ ರೂ.6.85 ಕೋಟಿ ಮತ್ತು ಪರಿಶಿಷ್ಟ ಪಂಗಡದ ಹಾಲು ಉತ್ಪಾದಕರಿಗೆ ಸೆಪ್ಟೆಂಬರ್-24 ಮತ್ತು ಅಕ್ಟೋಬರ್-2024ರ ಮಾಹೆಗಳಿಗೆ ರೂ.9.00 ಕೋಟಿ ಪ್ರೋತ್ಸಾಹಧನ ಪಾವತಿಗೆ ಬಾಕಿ ಇರುತ್ತದೆ. ಆರ್ಥಿಕ ಇಲಾಖೆ ನಿಯಮಾವಳಿಯಂತೆ 4ನೇ ಕಂತಿನ ಅನುದಾನ ಜನವರಿ-2025 ರಲ್ಲಿ ಬಿಡುಗಡೆಯಾಗ ಬೇಕಾಗಿದ್ದು, ಬಿಡುಗಡೆಯಾದ ನಂತರ ಬಾಕಿಯಿರುವ ಪ್ರೋತ್ಸಾಹಧನ ಪಾವತಿಸಲಾಗುವುದು.

ಸಂಖ್ಯೆ:ಇ ಪಸಂಮೀ 341 ಸಲೆವಿ 2024

(ಕೆ.ವೆಂಕಟೇಶ್)

ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು.